

ಒಂದರ ಬೆನ್ನಿಗೊಂದು ಅದ್ದೂರಿ ಸಿನಿಮಾ! ಇದು ಚಿತ್ರಮಂದಿರಗಳ ಕೊರತೆಯ ಸಮಯ!

# ಗಾಂಧಿನಗರದಲ್ಲಿ ಜಂಬೂಸವಾರಿ



ವಾರಕ್ಕೆ ನಾಲ್ಕೈದು ಸಿನಿಮಾಗಳು ತೆರೆ ಕಾಣುವುದು ಹಾಗೂ ತೆರೆ ಕಂಡಷ್ಟೇ ವೇಗವಾಗಿ ಆ ಸಿನಿಮಾಗಳು ಚಿತ್ರಮಂದಿರಗಳಿಂದ ನಿರ್ಗಮಿಸುವುದು ಗಾಂಧಿನಗರಕ್ಕೆ ಹೊಸತಲ್ಲ. ಈ ನಿಟ್ಟಿನಲ್ಲಿ ಕನ್ನಡ ಚಿತ್ರರಂಗದಲ್ಲಿ ಪ್ರತಿವಾರವೂ ಜಂಬೂಸವಾರಿ! ಆದರೆ, ಅಕ್ಟೋಬರ್ ತಿಂಗಳಲ್ಲಿ ಕನ್ನಡ ಚಿತ್ರರಂಗ ನಿಜ ಅರ್ಥದಲ್ಲಿ ಜಂಬೂಸವಾರಿಗೆ ಸಾಕ್ಷಿಯಾಗಲಿದೆ – ಅದ್ದೂರಿ ಚಿತ್ರಗಳ ಬಿಡುಗಡೆಯ ಮೂಲಕ.

ದಸರೆಗೆ ಮುನ್ನುಡಿ ಎನ್ನುವಂತೆ 'ದೊಡ್ಮನೆ ಹುಡ್ಗ' ಸೆ. 20ರಂದು ತೆರೆಕಾಣುತ್ತಿದೆ. ಪುನೀತ್ ರಾಜಕುಮಾರ್ ಅಭಿನಯದ 25ನೇ ಸಿನಿಮಾ ಎನ್ನುವ ವಿಶೇಷಣ ಈ ಸಿನಿಮಾ ಚಿತ್ರರಸಿಕರಲ್ಲಿ ವಿಶೇಷ ನಿರೀಕ್ಷೆ ಹುಟ್ಟುಹಾಕಿದೆ. ಪುನೀತ್ ಅಭಿಮಾನಿಗಳಂತೂ ದೊಡ್ಡದೊಂದು ಸಂಭ್ರಮ ಸೃಷ್ಟಿಸಲು ತುದಿಗಾಲಲ್ಲಿ ನಿಂತಿದ್ದಾರೆ. ಪುನೀತ್‌ರ ಇತ್ತೀಚಿನ ಚಿತ್ರಗಳು ನಿರೀಕ್ಷಿಸಿದಷ್ಟು ಗೆಲುವು ಸಾಧಿಸದ ಹಿನ್ನೆಲೆಯಲ್ಲಿ 'ದೊಡ್ಮನೆ ಹುಡ್ಗ'ನ ಬಗ್ಗೆ ನಿರೀಕ್ಷೆಗಳೂ ಹೆಚ್ಚಿವೆ. ಇದರ ಜೊತೆಗೆ, ಸೂರಿ ನಿರ್ದೇಶನ ಎನ್ನುವುದು ಕೂಡ ನಿರೀಕ್ಷೆಗೆ ಕಾರಣವಾಗಿದೆ.

ಅಕ್ಟೋಬರ್ ತಿಂಗಳ ಮೊದಲ ವಾರವಂತೂ ಚಿತ್ರರಸಿಕರ ಪಾಲಿಗೆ ಹಬ್ಬ. ನಿಖಿಲ್ ಅಭಿನಯದ 'ಜಾಗ್ವಾರ್' ಚಿತ್ರ ಅ. 6ರಂದು ತೆರೆ ಕಾಣುವುದು ಹೆಚ್ಚೂಕಡಿಮೆ ಖಚಿತವಾಗಿದೆ. ತಮ್ಮ ಪುತ್ರನನ್ನು ಹೀರೊ ಆಗಿ ಗೆಲ್ಲಿಸಲು ಪಣ ತೊಟ್ಟಂತಿರುವ ಎಚ್.ಡಿ. ಕುಮಾರಸ್ವಾಮಿ ಚಿತ್ರವನ್ನು ಅದ್ದೂರಿಯಾಗಿ ನಿರ್ಮಿಸಿದ್ದಾರೆ (ನಿರ್ದೇಶನ: ಮಹದೇವ). ಕನ್ನಡದ ಜೊತೆಗೆ ತೆಲುಗಿನಲ್ಲೂ ರೂಪುಗೊಂಡಿರುವ ಈ ಚಿತ್ರದ ಗೀತೆಗಳ ಧ್ವನಿಮುದ್ರಿಕೆ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗಷ್ಟೇ ಮಂಡ್ಯ ಹಾಗೂ ಹೈದರಾಬಾದ್‌ಗಳಲ್ಲಿ ವೈಭವದಿಂದ ನಡೆದಿದೆ.

'ಜಾಗ್ವಾರ್'ನಲ್ಲಿ ತೆಲುಗಿನ ಬ್ರಹ್ಮಾನಂದ, ರಮ್ಯಕೃಷ್ಣ ಅವರಂಥ ಹಿರಿಯರು ನಟಿಸಿರುವುದು ವಿಶೇಷ. ಇದರ ಜೊತೆಗೆ ಬೆಳದಿಂಗಳ ಬಾಲೆ ತಮನ್ನಾ ವಿಶೇಷ ಹಾಡೊಂದರಲ್ಲಿ ಕುಣಿದಿದ್ದಾರಂತೆ. ಒಟ್ಟಿನಲ್ಲಿ ಪ್ರೇಕ್ಷಕರ ಕಣ್ಣಿಗೆ ಹಬ್ಬವನ್ನುಂಟು ಮಾಡಲು 'ಜಾಗ್ವಾರ್' ಬಳಗ ಸಾಕಷ್ಟು ಕಸರತ್ತು ನಡೆಸಿದೆ.

'ಜಾಗ್ವಾರ್' ಬೆನ್ನಿಗೆ, ಅ. 7ರಂದು ಪ್ರಕಾಶ್ ರೈ ನಿರ್ಮಾಣ–ನಿರ್ದೇಶನದ 'ಇದೊಳ್ಳೆ ರಾಮಾಯಣ' ತೆರೆ ಕಾಣಲಿದೆ. ಗ್ರಾಮೀಣ ಸೊಗಡಿನ ಜೊತೆಗೆ, ಒಬ್ಬ ವ್ಯಕ್ತಿಯ ಅಂತರಂಗದೊಳಗೆ ಹುದುಗಿರುವ ಹಲವು ಮುಖಗಳನ್ನು